ಬೂಕನಕೆರೆ ವಿಜೇಂದ್ರ, ಮೈಸೂರು

ಇಲ್ಲೊಬ್ಬನು ಮಗ ಸತ್ತಾಗ ಅಳದವನು ಮನೆಯ ನಾಯಿ ಸತ್ತಾಗ ಅಳುತ್ತಿದ್ದಾನಲ್ಲ?



ಮಗ ಇವನನ್ನೆಂದೋ ತೊರೆದು ಪರದೇಶಿ ಆಗಿದ್ದನಂತೆ. ನಾಯಿಯೇ ಅವನ ವಾಕ್/ಟಾಕ್–ಮೇಟ್ ಆಗಿತ್ತಂತೆ.

ಮಧು ಹೆಚ್.ಡಿ., ಹಾಸನ

ಹೆಂಡತಿ ಎಂಬ ಪದವೇ ಕಿರಿಕಿರಿಯೋ ಅಥವಾ ಹೆಂಡತಿಯ ಸ್ಥಾನವನ್ನು ನಿಭಾಯಿಸುವುದು ಕಿರಿಕಿರಿಯೋ?

ಹೆಂಡತಿಯು ಹೆಂಡತಿಯ ಸ್ಥಾನವನ್ನು ನಿಭಾಯಿಸುವುದೇ ಕಿರಿಕಿರಿ – ಗಂಡನಿಗೆ.

ಅನಸೂಯ ಟಿ. ಕೇದಿಗೆಮನೆ

ಎಲ್ಲಾ ಮನುಷ್ಯರ ಬದುಕು ಒಂದೇ ರೀತಿ ಇದ್ದಿದ್ದರೆ?

ಅದು ಶಿಲಾಯುಗ ಆಗಿರುತ್ತಿತ್ತು.

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ

ಹೆಂಡತಿಯ ಸ್ಥಾನ ಗಂಡನ ಎಡಭಾಗದಲ್ಲಿಯೇ ಏಕೆ?



He is my right ಎಂದು ಹೇಳಿಕೊಳ್ಳಲು ಅದೇ ಸೂಕ್ತ.

ಶಿಹಿಮೊಗೆ ರಮೇಶ್, ಮೈಸೂರು

ಸ್ವೀಟ್ ಸಿಕ್ಸ್‌ಟೀನ್‌ಗೂ, ಸ್ವೀಟ್‌ಲೆಸ್ ಸಿಕ್ಸ್ಟಿಗೂ ವ್ಯತ್ಯಾಸವೇನು?

ಸೆಳೆತವೇ. ಸಿಕ್ಸ್‌ಟೀನ್‌ನಲ್ಲಿ ಪ್ರೀತಿಯ ಸೆಳೆತ; ಸಿಕ್ಸ್ಟಿಯಲ್ಲಿ ಸ್ನಾಯು/ನರಗಳ ಸೆಳೆತ.

ನಾ. ಜ್ಯೋತಿ, ಹೂವಿನಹಡಗಲಿ

ಸರ್ವಪಕ್ಷಗಳು 'ಮತದಾರರೇ, ದಮ್ಮಿದ್ರೆ, ತಾಕತ್ತಿದ್ರೆ ಕಡ್ಡಾಯವಾಗಿ ಮತ ನೀಡಿ' ಎನ್ನರೇಕೆ?

'ನಿಮಗೆ ದಮ್ಮಿದ್ರೆ, ತಾಕತ್ತಿದ್ರೆ, ಕಾಸು ಖರ್ಚ್ ಮಾಡ್ದೆ ವೋಟ್ಕೇಳಿ ನೋಡೋಣ' ಅಂದು ಬಿಟ್ಟಾರೂಂತ ಭಯ.

ಎನ್.ವಿ. ಶ್ರೀನಿವಾಸ್. ಮೈಸೂರು

'ರೈಲು ಬಿಡುವುದಕ್ಕೆ' ಯಾವ ಗೇಜು ಸೂಕ್ತ?

ಕೇಳಿಸಿಕೊಳ್ಳುವವರು ದಡ್ಡರೆಂದು 'ನ್ಯಾರೋ' ಆಗಿ 'ಗೇಜ್' ಮಾಡುವುದೇ ರೂಢಿಯಂತೆ.

ಜೀವಿ, ಗೊಂಡೇದಹಳ್ಳಿ

ನೋಟ್‌ಬುಕ್‌ಗಳಲ್ಲಿ ಕಿಂಗ್ ಸೈಜ್ ಇದೆ. ಕ್ವೀನ್ ಸೈಜ್ ಯಾಕಿಲ್ಲ?

ಕ್ವೀನ್ ನಂತರ ಅದರಲ್ಲಿ ಸೇರುತ್ತಾಳೆ. ಸರಸ್ವತಿಯೇ ನೋಟ್‌ಬುಕ್‌ನಲ್ಲಿ ವಿರಾಜಿಸುವ ಕ್ವೀನು.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

ರಾಜಕಾರಣಿಗಳು ಬಡವರ ಬಂಧು ಎಂದು ಹೇಳಿಕೊಳ್ಳುತ್ತಾರಲ್ಲ?

ಹೌದು. ಹಾಗೆ ಹೇಳಿ ಅವರನ್ನು ಕೊಳ್ಳುತ್ತಾರೆ.

ಜಗದೀಶ ಬಿ. ಹೊಸೂರು, ಮೈಸೂರು

ಗಂಡನಿಗೆ ನ್ಯೂಸ್ ಇಷ್ಟ. ಹೆಂಡತಿಗೆ ಧಾರಾವಾಹಿ ಇಷ್ಟ. ಮಕ್ಕಳಿಗೆ?

ಅಪ್ಪ–ಅಮ್ಮ ಇಬ್ಬರೂ ಅವರನ್ನು ಅವರ ಪಾಡಿಗೆ ಬಿಡುವುದು ಇಷ್ಟ.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು

ಇಲ್ಲಿಂದಲ್ಲಿಗೆ ಹೋದಾಗ ಅಲ್ಲಿಂದಿಲ್ಲಿಗೆ ಬರಲು ಆಗುವುದಿಲ್ಲ?

ವಿದೇಶಕ್ಕೆ. 40 ವರ್ಷಗಳ ಹಿಂದೆ 'ಐ ವಿಲ್ ರಿಟರ್ನ್ ಇನ್ 2 ಇಯರ್ಸ್' ಎಂದ ದೊಡ್ಡ ಪಡೆಯೇ ಅಲ್ಲಿದೆ.

ಮಹಾವೀರ ಕಾಸರ, ಶಿವಮೊಗ್ಗ

ರಾಜಾ ಪ್ರತ್ಯಕ್ಷ ದೇವತಾ. ಆದರೆ ಇಂದು ನಮ್ಮನ್ನು ಆಳುತ್ತಿರುವ ಮುಖಂಡರು?

ಕೆಲವರಂತೂ ಚುನಾವಣಾ ಸಮಯದಲ್ಲಷ್ಟೇ ಕಾಣಿಸಿಕೊಳ್ಳುವ ಅಂತರ್ಪಿಶಾಚಿಗಳು.

ಬಿ. ಬಸವರಾಜ್, ಹರಿಹರ

ಅಂದು ಸಹವಾಸದಿಂದ ಸನ್ಯಾಸಿಯು ಕೆಟ್ಟನಂತೆ. ಇಂದು?

ಸನ್ಯಾಸಿಯ ಸಹವಾಸದಿಂದ ಸಂಸಾರಗಳು ಕೆಟ್ಟವಂತೆ.

## ವಾರದ ಪ್ರಶ್ನೆ

ವಿ. ಹೇಮಂತಕುಮಾರ್, ಬೆಂಗಳೂರು

ನ್ಯೂಟನ್ನನ ಮೇಲೆ ಸೇಬಿನ ಬದಲು ತೆಂಗಿನಕಾಯಿ ಬಿದ್ದಿದ್ದರೆ ಗುರುತ್ವಾಕರ್ಷಣೆ ಕಂಡುಹಿಡಿಯಲು ಆಗುತ್ತಿತ್ತಾ?

ಗುರುತ್ವಾಕರ್ಷಣೆಯ ಜೊತೆಜೊತೆಗೇ 'ಬೊಂಡಾ ವರ್ಸಸ್ ಬೊಂಬಡಾ' ನಿಯಮವನ್ನೂ ಕಂಡುಹಿಡಿದಿರುತ್ತಿದ್ದ.

ರಾಜಶೇಖರ ಹಾದಿಮನಿ, ಧಾರವಾಡ

ರಾಜರೇ ಇಲ್ಲದಿರುವಾಗ 'ರಾಜ ಕಾಲುವೆ'ಗಳು ಎಲ್ಲಿಂದ ಬಂದಿವೆ ರಾಮ್?

ಶಂಕರಪೋಳಿಯಲ್ಲಿ ಶಂಕರನಿರುವನೆ? ಕಾಶಿಹಲ್ವದಲ್ಲಿ ಕಾಶಿ? ಅದು ರಾಜನ ಕಾಲುವೆಯಲ್ಲ, ಕಾಲುವೆಗಳ ಪೈಕಿ ರಾಜ.

ಬಿ.ಆರ್. ಉಷಾ, ಕೆನಡಾ

ಭಾರತೀಯರ ಹೊಸ ವರ್ಷಕ್ಕೂ ವಿದೇಶಿಯರ ಹೊಸ ವರ್ಷಕ್ಕೂ ವ್ಯತ್ಯಾಸವೇನು?

ಭಾರತೀಯರು ಹೊಸವರ್ಷವನ್ನು ಸ್ವಾಗತಿಸಲು ಎದ್ದು ನಿಲ್ಲುವ ಸ್ಥಿತಿಯಲ್ಲಿರುತ್ತಾರೆ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

ದಿನಕ್ಕೊಂದ್ ಸೇಬ್ತಿಂದ್ರೆ ವೈದ್ಯರಿಂದ ದೂರವಿರ್ಬಹುದಂತೆ. ವೈದ್ಯನ ಹೆಂಡ್ತಿಗೆ ಸೇಬ್ತಿನ್ಬೇಕನ್ಸಿದ್ರೆ ಏನ್ಮಾಡ್ಬೇಕು?



ಮೊದಲೊಂದು ಹಸಿ ಬೆಳ್ಳುಳ್ಳಿ ತಿಂದುಬಿಡಲಿ. ಪತಿಯೇ ಸ್ವಪ್ರೇರಣೆಯಿಂದ ವಾರಗಟ್ಟಲೆ ದೂರವಿರುತ್ತಾನೆ.

ಸುಶೀಲ ಎಸ್. ಪಾಟೀಲ, ಸಂಕೇಶ್ವರ

ಹರಟೆಯಲ್ಲಿ ಸಿಗುವಷ್ಟು ಆನಂದ ನಮಗೆ ಬೇರೆಲ್ಲೂ ಸಿಗುವುದಿಲ್ಲ. ಏನಂತೀರಿ?

ಪರ್ವತದ ಶಿಖರವನ್ನೇರಿ ಬೆವೆತ ಮೈಯನ್ನು ಗಾಳಿಗೊಡ್ಡಿ. ಆ ಮೌನಸುಖದ ಮುಂದೆ ಮಾತು ಕಸ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ತಾಳ್ಮೆಗೂ, ಕೋಪಕ್ಕೂ ಎಷ್ಟು ದೂರ?

ಎಳ್ಳಷ್ಟೂ ಇಲ್ಲ. ತಾಳ್ಮೆ ಮುಗಿದ ತಕ್ಷಣ ಕೋಪದ ಆರಂಭ.

■ ರಾಮ್